ಸಾಕ್ಷಿಯನ್ನು ಕರೆಸಿ ದಿಃ 12/06/2018 ರಂದು ಪ್ರಮಾಣವಚನ ಮಾಡಿಸಲಾಯಿತು.

**ಪಾಟೀ ಸವಾಲು: 1ನೇ ಪ್ರತಿವಾದಿಯ ಪರವಾಗಿ ಶ್ರೀ. ಎಂ.ಆರ್. ವಕೀಲರಿಂದಃ**

3. ನನ್ನ ತಂದೆಗೆ ಒಟ್ಟು 8 ಜನ ಮಕ್ಕಳು, ಅವರಲ್ಲಿ 7 ಗಂಡು 1 ಹೆಣ್ಣು ಎಂದರೆ ಸರಿ. ಸದ್ರಿ 8 ಜನ ಮಕ್ಕಳಲ್ಲಿ ಕೃಷ್ಣಮೂರ್ತಿ ಮೊದಲನೇಯವರು, ರಾಮಚಂದ್ರ ಎರಡನೇಯವರ ,ಮಹಾಬಲ ಮೂರನೇಯವರು, ಜನಾರ್ಧನ ನಾಲ್ಕನೇಯವರು, ವಾಮನ್ ರಾವ್ ಐದನೇಯವರು, ನಾಗರತ್ನ ಆರನೇಯವರು, ನಾನು ಏಳನೇಯವನು ಹಾಗೂ ಸೋಮಶೇಖರ ಕೊನೆಯವನು ಎಂದರೆ ಸರಿ. ಮೇಲೆ ಹೇಳಿದ 8 ಜನ ರ ಪೈಕಿ ಕೃಷ್ಣಮೂರ್ತಿ ಹಾಗೂ ರಾಮಚಂದ್ರ ಈಗ ಜೀವಂತ ಇಲ್ಲ ಎಂದರೆ ಸರಿ. ಕೃಷ್ಣಮಾರ್ತಿಯವರು ತೀರಿ ಹೋಗಿ 3 ವರ್ಷಗಳಾಯಿತು. ರಾಮಚಂದ್ರರವರು ತೀರಿ ಹೋಗಿ ಸುಮಾರು 20 ವರ್ಷಗಳಾಯಿತು. ನನ್ನ ಅಣ್ಣನಾದ ಕೃಷ್ಣಮೂರ್ತಿ ಬದುಕಿದ್ದರೆ ಅವರಿಗೆ ಈಗ 85 ರಿಂದ 86 ವರ್ಷ ಆಗುತ್ತಿತ್ತು, ನನ್ನ ಅಣ್ಣನಾದ ರಾಚುಂದ್ರರವರು ಬದುಕಿದ್ದರೆ ಅವರಿಗೆ ಈಗ 84 ವರ್ಷ ಆಗುತ್ತಿತ್ತು, ನನ್ನ ಅಣ್ಣನಾದ ಮಹಾಬಲನಿಗೆ ಈಗ ಸುಮಾರು 82 ವರ್ಷ ವಯಸ್ಸು. 1ನೇ ಪ್ರತಿವಾದಿಗೆ ಈಗ 80 ವರ್ಷ ವಯಸ್ಸು. 3ನೇ ಪ್ರತಿವಾದಿಗೆ ಈಗ 78 ವರ್ಷ ವಯಸ್ಸು. 5ನೇ ಪ್ರತಿವಾದಿಗೆ ಈಗ 71 ವರ್ಷ ವಯಸ್ಸು. ನನಗೆ ಈಗ 65 ವರ್ಷ ವಯಸ್ಸು. 4ನೇ ಪ್ರತಿವಾದಿಗೆ ಈಗ 63 ವರ್ಷ ವಯಸ್ಸು.

4. ನಾನು ನನ್ನ ಎಲ್ಲಾ ಸಹೋದರ ಸಹೋರಿಯವರ ಜೊತೆಯಲ್ಲಿ ಚೆನ್ನಾಗಿದ್ದೇನೆ. 5ನೇ ಪ್ರತಿವಾದಿಯ ಮದುವೆ 1964 ನೇ ಇಸವಿಯಲ್ಲಿ ನಡೆದಿರುತ್ತದೆ. ಮದುವೆಯಾದಂದಿನಿಂದ 5ನೇ ಪ್ರತಿವಾದಿ ಬೆಂಗಳೂರಿನಲ್ಲಿಯೇ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸುಮಾರು 1954ನೇ ಇಸವಿಯಿಂದ ನನ್ನ ಅಣ್ಣನಾದ ಕೃಷ್ಣಮೂರ್ತಿ ಬಸ್ಸ್ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರ ಅ ಸಂದರ್ಭದಲ್ಲಿ ಶಿವಮೊಗ್ಗದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. 1954-55 ನೇ ಇಸವಿಯಿಂದ ನನ್ನ ಅಣ್ಣನಾದ ರಾಮಚಂದ್ರ ಲಕ್ಕವಳ್ಳಿಯಲ್ಲಿ ಪೆಟ್ರೋಲ್ ಬಂಕಿನಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. 1956-57 ನೇ ಇಸವಿಯಲ್ಲಿ ನನ್ನ ಸದ್ರಿ ಅಣ್ಣ ರಾಮಚಂದ್ರ

ಬೆಂಗಳೂರಿಗೆ ಹೋಗಿರುತ್ತಾರೆ. ನನ್ನ ಅಣ್ಣ ರಾಮಚಂದ್ರ ಲಕ್ಕವಳ್ಳಿಯಲ್ಲಿ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡುತ್ತಿದ್ದಾಗ ಅವರು ಲಕ್ಕವಳ್ಳಿಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ.

5) ಮಹಾಬಲ ರವರು ಹಿಂದೆ ಸಾಗರದಲ್ಲಿ ವಿಟೋಬ ರಾವ್ ಎಂಬವವರ ಬಳಿ ಲಾರಿಯ ನಿರ್ವಹಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆಮೇಲೆ ಸದ್ರಿ ನನ್ನ ಅಣ್ಣ ಸಾಗರದ ಪುತ್ತುರಾಯರ ಹತ್ತಿರ ಲಾರಿಯ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಮಹಾಬಲರವರು 1979ನೇ ಇಸವಿಯಲ್ಲಿ ಎಸ್.ಎನ್.ನಗರದ 1ನೇ ಅಡ್ಡರಸ್ತೆಯಲ್ಲಿರುವ ರಣಜೀತ್ ಎಂಬವವರು ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಆಮೇಲೆ ಸದ್ರಿ ಮಹಾಬಲ್‌ರವರು ಖತೀಜ ಬಿ ಕೋಂ. ಮಹಮ್ಮದ್ ಸಾಬ್‌ರವರಿಂದ ಕಟ್ಟಿಸಿರುವ ಒಂದು ಮನೆಯನ್ನು ಖರೀದಿ ಮಾಡಿ ಈಗಲೂ ಅವರು ಅದೇಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ.

6) 3ನೇ ಪ್ರತಿವಾದಿಯೂ ಎಲೆಕ್ಟ್ರಿಷನ್ ಎಂದರೆ ಸರಿ. 3ನೇ ಪ್ರತಿವಾದಿಯೂ ಎಸ್.ಎನ್. ನಗರ ಬಡವಾಣೆಯಲ್ಲಿ ಮೂರ್ತಿ ರಾವ್ ಎಂಬವರ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಆಮೇಲೆ 3ನೇ ಪ್ರತಿವಾದಿಯು ಎಸ್.ಎನ್.ನಗರದಲ್ಲಿ 1 ಖಾಲಿ ನಿವೇಶನವನ್ನು ಖರೀದಿ ಮಾಡಿ ಅಲ್ಲಿ ಮನೆ ಕಟ್ಟಿಸಿರುತ್ತಾರೆ ಎಂದರೆ ಸರಿ. ನಂತರ 3ನೇ ಪ್ರತಿವಾದಿಯೂ ಸದ್ರಿ ಮನೆಯನ್ನು ಮಾರಾಟ ಮಾಡಿ ಸಾಗರದ ಅಶೋಕ ರಸ್ತೆಯಲ್ಲಿರುವ ಅವರ ಮಗಳ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ.

7) ನನ್ನ ಅಣ್ಣಂದಿರಾದ ಕೃಷ್ಣಮೂರ್ತಿ ಮತ್ತು ರಾಮಚಂದ್ರ 7 ಅಥವಾ 8ನೇ ತರಗತಿಯ ವರೆಗೆ ಓದಿರಬಹುದು. 1 ರಿಂದ 3 ಹಾಗೂ 5ನೇ ಪ್ರತಿವಾದಿಯರು ಸಹ 7 ಅಥವಾ 8ನೇ ತರಗತಿಯ ವರೆಗೆ ಓದಿರಬಹುದು. ನಾನು 9ನೇ ತರಗತಿಯ ವರೆಗ ಓದಿರುತ್ತೇನೆ. 4ನೇ ಪ್ರತಿವಾದಿಯು ಬಿ.ಎ. ಪದವಿಧರನಾಗಿರುತ್ತಾನೆ. ನನ್ನ ತಂದೆ ಸಾಗರಕ್ಕೆ ಬರುವ ಮುಂಚೆ ತೀರ್ಥಹಳ್ಳಿ ತಾಲ್ಲೂಕಿನ ಆರಗ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಆರಗದಿಂದ ಸಾಗರಕ್ಕೆ ಪ್ರಥಮ ಬಾರಿಗೆ ಬಂದಾಗ ನನ್ನ ತಂದೆ ಮಂಕೋಡು ಬಡಾವಣೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ.

8) ನನ್ನ ವಿದ್ಯಾಭ್ಯಾಸ ಮುಗಿದ ನಂತರ 1971-72ನೇ ಇಸವಿಯಲ್ಲಿ ಸಾಗರದ ತಿಲಕ್ ರಸ್ತೆಯಲ್ಲಿ ಲಕ್ಷ್ಮಿ ಸ್ಟೋರ್ಸ್ ಎಂಬ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆನು. ಆಮೇಲೆ ನಾನು ಸ್ವಲ್ಪ ದಿನ ಗೋವಾದಲ್ಲಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿ. 1979ನೇ ಇಸವಿಯಲ್ಲಿ ನಾನು ಗೋವಾದಲ್ಲಿ ಇದ್ದಾಗ ನನ್ನ ತಾಯಿ ತೀರಿ ಹೊಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ತೀರಿ ಹೋದ 10 ದಿವಸಗಳ ನಂತರ ನನ್ನ ತಾಯಿ ತೀರಿ ಹೋದ ವಿಷಯ ನನಗೆ ತಿಳಿದು ನಾನು ಊರಿಗೆ ಬಂದಿರುತ್ತೇನೆ ಎಂದರೆ ಸರಿ. 1982ನೇ ಇಸವಿಯಲ್ಲಿ ನಾನು ಶಿವಮೊಗ್ಗಕ್ಕೆ ಹೋಗಿರುತ್ತೇನೆ. 1979 ನೇ ಇಸವಿಯಲ್ಲಿ 1ನೇ ಪ್ರತಿವಾದಿಯು ನನ್ನನ್ನು ಶಿವಮೊಗ್ಗಕೆ ಕರೆದುಕೊಂಡು ಹೋಗಿ ಕೃಷ್ಣಮೂರ್ತಿ ಎಂಬವವರು ಬಳಿ ಆಭಣದ ತಯಾರಿಕೆ ಕೆಲಸಕ್ಕೆ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ಈಗ ನಾನು ಶಿವಮೊಗ್ಗದ ಚಂದ್ರನ್ ಎಂಬವರ ಮಾಲಿಕತ್ವದ ದೀಪಾ ಜ್ಯುವೆಲರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸದ್ರಿ ಜ್ಯುವೆಲರಿಯಲ್ಲಿ ನಾನು ಈಗ್ಗೆ ಸುಮಾರು 6 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಅದಕ್ಕಿಂತ ಮುಂಚೆ ಅಂದರೆ 1982ನೇ ಇಸವಿಯಿಂದ ಶಿವಮೊಗ್ಗದ ನಾಗೇಶ್ ರಾಯ್ಕರ್ ಎಂಬವರ ಪ್ರಶಾಂತ್ ಜ್ಯುವೆಲರಿಯಲ್ಲಿ ಕೆಲಸ ಮಾಡುತ್ತಿದ್ದೇನು.

9) ನಾಲ್ಕನೇ ಪ್ರತಿವಾದಿಯು ಶಿವಮೊಗ್ಗದ ಡಿ.ವಿ.ಎಸ್. ಕಾಲೇಜಿನಲ್ಲಿ ಅಟೆಂಡ್‌ರಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅದಕ್ಕಿಂತ ಮುಂಚೆ 4ನೇ ಪ್ರತಿವಾದಿಯು ಬೆಂಗಳೂರಿನಲ್ಲಿರುವ 5ನೇ ಪ್ರತಿವಾದಿಯ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. 5ನೇ ಪ್ರತಿವಾದಿಯು ಶಿವಮೊಗ್ಗದಲ್ಲಿ ಕೆಲಸಕ್ಕೆ ಸೇರಿಕೊಂಡ ನಂತರ ಅವರು ಶಿವಮೊಗ್ಗದಲ್ಲಿಯೇ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿಯು ತನ್ನ 16ನೇ ವಯಸ್ಸಿನಲ್ಲಿ ಸಾಗರದ ದಾಮೋದರ ಸ್ಟೋರ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆಮೇಲೆ 1ನೇ ಪ್ರತಿವಾದಿಯು ಶ್ರೀನಿವಾಸ್ ಸ್ಟೋರ್ಸ್‌ನಲ್ಲಿ ಹಾಗೂ ಇಂಡಿಯನ್ ಬ್ಯಾಂಕಿನಲ್ಲಿ ಕೆಲಸ ಮಾಡಿ ನಂತರ ಸಾಗರ ಪುರಸಭೆಯಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ.

10) 1979ನೇ ಇಸವಿಯಲ್ಲಿ 2ನೇ ಪ್ರತಿವಾದಿಯು ಕುಟುಂಬದ ಆಸ್ತಿಯಲ್ಲಿ ಹಿಸ್ಸೆಯನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ. 1976ನೇ ಇಸವಿಯಲ್ಲಿ 3ನೇ ಪ್ರತಿವಾದಿಯು ಕುಟುಂಬದ ಆಸ್ತಿಯಲ್ಲಿ ಹಿಸ್ಸೆಯನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ಇರುವ ಮನೆ ಮತ್ತು ಅಂಗಡಿ

ಮಳಿಗೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವ ಸ್ವತ್ತಿನಲ್ಲಿ ಇರುವ ಮನೆ 22 ಇಂಟು 60 ಅಡಿ ಹಾಗೂ ಅಂಗಡಿ ಮಳಿಗೆ 10 ಇಂಟು 14 ಅಡಿ ಇದೆ ಎಂದರೆ ಇರಬಹುದು, ಆದರೆ ನನಗೆ ಗೊತ್ತಿಲ್ಲ. ನಿಪಿ.2 ಕರ ಅಕರಣೆಯಾಧಿಯಲ್ಲಿ ಮನೆಯ ವಿಸ್ತೀರ್ಣ 23 ಇಂಟು 33 ಅಡಿ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ.3 ಮತ್ತು ನಿಪಿ.4 ಕರ ಅಕರಣೆಯಾಧಿಯಲ್ಲಿ ಮನೆಯ ವಿಸ್ತೀರ್ಣ 7.10 ಇಂಟು 10.10 ಮೀಟರ್ ಹಾಗೂ 2.20 ಇಂಟು 9.60 ಮೀಟರ್ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ.7 ಸ್ವಯಂಘೋಷಿತ ಆಸ್ತಿ ತೆರಿಗೆ ವಿವರದಲ್ಲಿ ಭೂ ವಿಸ್ತೀರ್ಣ 80 ಇಂಟು 89 ಅಡಿ ಕಟ್ಟಡದ ವಿಸ್ತೀರ್ಣ 814 ಎಂದು ಬರೆಯಲಾಗಿದೆ ಎಂದರೆ ಸರಿ.

11) ದಾವ ಸ್ವತ್ತಿನ ಮಂಜೂರಾತಿಯ ಬಗ್ಗೆ ಹಣ ಕಟ್ಟಿ ಎಂದು 1982ನೇ ಇಸವಿಯಲ್ಲಿ ನನ್ನ ತಂದೆಗೆ ಸಾಗರದ ಪುರಸಭೆಯಿಂದ ನೋಟಿಸು ಬಂದಿತ್ತು ಎಂದು ನನಗೆ 1ನೇ ಪ್ರತಿವಾದಿಯು ಹೇಳಿರುತ್ತಾರೆ. ಅ ರೀತಿ ನೋಟಿಸು ಬಂದಿರುವ ಬಗ್ಗೆ ನನ್ನ ಹತ್ತಿರ ಯಾವುದೇ ದಾಖಲೆಗಳು ಇಲ್ಲ. ಅ ರೀತಿ ನೋಟಿಸು ಬಂದಿತ್ತು ಎಂದು ನನಗೆ 1ನೇ ಪ್ರತಿವಾದಿಯು ತಿಳಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತು ನನ್ನ ತಂದಗೆ ಮಂಜುರಾಗಿದೆ ಎಂದು ತೋರಿಸಲು ನನ್ನ ಹತ್ತಿರ ಯಾವುದೇ ದಾಖಲೆಗಳು ಇಲ್ಲ. ದಿ:10-11-1982 ರಂದು ದಾವ ಸ್ವತ್ತು 1ನೇ ಪ್ರತಿವಾದಿಯ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಅ ರೀತಿ ಮಂಜೂರಾಗುವ ಮುಂಚೆ ದಿ:12-08-1980 ಮತ್ತು 24-10-1980 ರಂದು 1ನೇ ಪ್ರತಿವಾದಿಯ ಹೆಸರಿಗೆ ದಾವ ಸ್ವತ್ತನ್ನು ಮಂಜೂರು ಮಾಡಬೇಕು ಎಂದು ನಿರ್ಣಯ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1980-81ನೇ ಸಾಲಿನಲ್ಲಿ ಬಗರ್‌ಹುಕಂ ನಿವೇಶನ ಮಂಜೂರಾತಿ ಸಂಬಂಧ ಪುರಸಭೆಯಿಂದ ಸರ್ಕಾರಕ್ಕೆ ಫಲಾನುಭವಿಗಳ ಪಟ್ಟಿಯನ್ನು ಕಳುಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಕಳುಹಿಸಿರುವ ಪಟ್ಟಿಯಲ್ಲಿ ದಾವ ಸ್ವತ್ತಿಗೆ ಸಂಬಂಧಪಟ್ಟಂತೆ 494 ಕ್ರಮ.ಸಂಖ್ಯೆಯಲ್ಲಿ 1ನೇ ಪ್ರತಿವಾದಿಯ ಹೆಸರು ಇದೆ ಎಂದರೆ ಸರಿಯಲ್ಲ. ಸದ್ರಿ ಪಟ್ಟಿಯಲ್ಲಿ ಎಲ್ಲಿಯೂ ಸಹ ನನ್ನ ತಂದೆಯವರು ಹೆಸರು ಇಲ್ಲ ಎಂದರೆ ಸರಿಯಲ್ಲ.

12) ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಪುರಸಭೆಗೆ 1ನೇ ಪ್ರತಿವಾದಿಯೇ ಹಣ ಪಾವತಿ ಮಾಡಿರುತ್ತಾರೆ ಎಂದರೆ ನಾವೆಲ್ಲರು ಹಣವನ್ನು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿಗೆ

ಸಂಬಂಧಪಟ್ಟಂತೆ ನಿವೇಶನ ಮೌಲ್ಯವನ್ನು 1ನೇ ಪ್ರತಿವಾದಿದಿ ಮಾತ್ರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ 1ನೇ ಪ್ರತಿವಾದಿಯ ಹೆಸರಿನಲ್ಲಿ ರಶೀದಿಯನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವ ಸ್ವತ್ತಿನ ನಿವೇಶನದ ಮೌಲ್ಯವನ್ನು ನಾವೆಲ್ಲರು ಕೊಟ್ಟಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ನಿವೇಶನ ಮೌಲ್ಯದ ಬಗ್ಗೆ ನಾನು 1ನೇ ಪ್ರತಿವಾದಿಗೆ 1700 ರೂಪಾಯಿಯನ್ನು ಕೊಟ್ಟಿರುತ್ತೇನೆ. ಆ ಬಗ್ಗೆ ಉಳಿದವರು ಎಷ್ಟು ಹಣ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು 1700 ರೂಪಾಯಿ ಹಣವನ್ನು 1ನೇ ಪ್ರತಿವಾದಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

13) 1982ನೇ ಇಸವಿಯಲ್ಲಿ ನನ್ನ ತಂದೆಯ ಹೆಸರಿಗೆ ಮಂಜೂರಾಗಬೇಕಾಗಿದ್ದ ದಾವಾ ಸ್ವತ್ತು 1ನೇ ಪ್ರತಿವಾದಿಯ ಹೆಸರಿಗೆ ಮಂಜೂರಾಗಿದೆ ಎಂದು ನಾವು ಯಾರು ಸಹ ಪುರಸಭೆಗೆ ತಕರಾರನ್ನು ಕೊಟ್ಟಿಲ್ಲ. ಅದೇ ರೀತಿ 2000 ನೇ ಇಸವಿಯಲ್ಲಿ 1ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಬಗ್ಗೆ ಕ್ರಯ ಪತ್ರ ಬರೆದುಕೊಟ್ಟ ಸಂದರ್ಭದಲ್ಲಿಯೂ ಸಹ ನಾವು ಯಾರು ಸಹ ತಕರಾರು ಮಾಡಿರುವುದಿಲ್ಲ. ದಿ:05-01-2000 ರಂದು ಪುರಸಭೆಯವರು ದಾವಾ ಸ್ವತ್ತಿನ ಬಗ್ಗೆ 1ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಕ್ರಯ ಪತ್ರವನ್ನು ನಾನು ಓದಿ ನೋಡಿಲ್ಲ. ಸದ್ರಿ ಕ್ರಯಪತ್ರದಲ್ಲಿ, ಪುರಸಭೆಯವರು ದಾವಾ ಸ್ವತ್ತಿನಲ್ಲಿ 1ನೇ ಪ್ರತಿವಾದಿಯೇ ವಾಸ ವಾಗಿರುವುದರಿಂದ ಹಾಗೂ ಅವರಿಗೆ ಸದ್ರಿ ಸ್ವತ್ತಿನಲ್ಲಿ ಸಂಪೂರ್ಣ ಹಕ್ಕು ಇರುವುದರಿಂದ ಕ್ರಯ ಪತ್ರ ಬರೆದುಕೊಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಕ್ರಯ ಪತ್ರದಲ್ಲಿ ನಮ್ಮ ಕುಟುಂಬದ ಪರವಾಗಿ ಸದ್ರಿ ಕ್ರಯಪತ್ರವನ್ನು 1ನೇ ಪ್ರತಿವಾದಿಯ ಹೆಸರಿಗೆ ಬರೆದುಕೊಡಲಾಗಿದೆ ಎಂದು ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

14) 2013ನೇ ಇಸವಿಯಲ್ಲಿ ದಾವಾ ಸ್ವತ್ತಿನ ಒಂದು ಭಾಗವನ್ನು 1ನೇ ಪ್ರತಿವಾದಿಯು 7ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2013ನೇ ಇಸವಿಯಲ್ಲಿ 1ನೇ ಪ್ರತಿವಾದಿಯ ಮಗಳ ಮದುವೆ ನಡೆಯಿತು ಎಂದರೆ ಸರಿ. ಸದ್ರಿ ಮದುವೆಯ ಹಣಕಾಸಿನ ತೊಂದರೆಗಾಗಿ ದಾವಾ ಸ್ವತ್ತಿನ ಒಂದು ಭಾಗವನ್ನು 1ನೇ ಪ್ರತಿವಾದಿಯು 7ನೇ ಪ್ರತಿವಾದಿಗೆ ಮಾರಟ

ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮಂಜೂರಾದ ಸಂದರ್ಭದಲ್ಲಿ ಅದರ ಒಟ್ಟು ವಿಸ್ತೀರ್ಣ 105 ಇಂಟು 89 ಅಡಿ ಇತ್ತು. ಕ್ರಯ ಪತ್ರ ಕೊಡುವ ಸಂದರ್ಭದಲ್ಲಿ ಪುರಸಭೆಯವರು ಸ್ಥಳ ತನಿಖೆ ಮಾಡಿದಾಗ ಸ್ಥಳದಲ್ಲಿ 80 ಇಂಟು 89 ಅಡಿ ಮಾತ್ರ ಇದ್ದ ಕಾರಣ ಕ್ರಯ ಪತ್ರವನ್ನು 80 ಇಂಟು 89 ಅಡಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಕ್ರಯ ಪತ್ರವನ್ನು 105 ಇಂಟು 89 ಅಡಿ ವಿಸ್ತೀರ್ಣಕ್ಕೆ ಬರೆದುಕೊಟ್ಟಿರುತ್ತಾರೆ.

**ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿದೆ.)**

ಓ ಹೇ ಕೇ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಾಗರ.